7, (87) ಶ್ರೀ ಧ್ರುವನಾರಾಯಣ ಆರ್. (ಸಂತೇಮಾರಳ್ಳಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಇತ್ತೀಚಿನ ಕನ್ನಡ ಚಲನಚಿತ್ರಗಳಿಂದ ಪ್ರದರ್ಶಿಸುವ ಅಶ್ಲೀಲ ದೃಶ್ಯಗಳು ಹಾಗೂ ಹಾಡುಗಳಿಂದ ಯುವ ಸಮೂಹದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ?

ಆ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಬಂದಿರುವುದಿಲ್ಲ.

ಆ) ಈ ವಿಷಯದ ವ್ಯಾಪ್ತಿಯು ಗೃಹ ಮತ್ತು ಕಂದಾಯ ಇಲಾಖೆಯ ಅಧೀನದಲ್ಲಿರುವುದರಿಂದ, ಅಂತಹ ಯಾವುದೇ ಘಟನೆಗಳು ಬಂದಾಗ ಆ ಇಲಾಖೆಗಳು ಸೂಕ್ತ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸಲು ಅವಕಾಶವಿದೆ.

8, (109) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯಲ್ಲಿರುವ 66/11 ಕೆ.ವಿ. ಮತ್ತು 33/11 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು); ?

ಆ) ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಮೇಲ್ಕಂಡ ಪ್ರಮಾಣದ ವಿದ್ಯುತ್ ಸ್ವೀಕರಣಾ (ರಿಸೀವಿಂಗ್ ಸ್ಟೇಷನ್) ಕೇಂದ್ರಗಳನ್ನು ಸ್ಥಾಪಿಸಲಾಗುವುದು;?

ಇ) ಬೇಸಿಗೆ ಕಾಲವು ಸಮೀಪಿಸುತ್ತಿವುದರಿಂದ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಅತ್ಯಂತ ಹಿಂದುಳಿದ ಔರಾದ್ ತಾಲ್ಲೂಕಿನಲ್ಲಿ ಸಾರ್ವಜನಿಕರ ಮತ್ತು ರೈತರ ಜಮೀನುಗಳಿಗೆ ತಡೆ ರಹಿತವಾಗಿ ವಿದ್ಯುತ್ ಒದಗಿಸಲು ಮತ್ತು ವೋಲ್ಟೇಜ್ ಸುಧಾರಿಸಲು ಹಾಗೂ ಒಟ್ಟಾರೆಯಾಗಿ ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆಯನ್ನು ನೀಗಿಸಲು ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಬೀದರ್ ಜಿಲ್ಲೆಯಲ್ಲಿ 220/110 ಕೆ.ವಿ., 110/11 ಕೆ.ವಿ. ಮತ್ತು 33/11 ಕೆ.ವಿ. ವಿದ್ಯುತ್ ಉಪಕೇಂದ್ರಗಳು ಇವೆ. ಈ ಜಿಲ್ಲೆಯಲ್ಲಿ ಯಾವುದೇ 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಇರುವುದಿಲ್ಲ. ಬೀದರ್ ಜಿಲ್ಲೆಯಲ್ಲಿ ಹಾಲಿ ಇರುವ 220/110 ಕೆ.ವಿ., 110/11 ಕೆ.ವಿ. ಮತ್ತು 33/11 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವೋಲ್ಟೇಜ್	ವಿದ್ಯುತ್ ಉಪಕೇಂದ್ರಗಳ ಸಂಖ್ಯೆ
1.	220/110 ಕೆ.ವಿ.	1
2.	110/11 ಕೆ.ವಿ.	8
3.	33/11 ಕೆ.ವಿ.	19
	ಒಟ್ಟು	**28**

ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ಈ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ವಿದ್ಯುತ್ ಉಪಕೇಂದ್ರಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಇ) ಈ ಮುಂಚೆ ಔರಾದ್ ತಾಲ್ಲೂಕಿಗೆ ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿತ್ತು. ಆದರೆ ಈಗ ಔರಾದ್ ತಾಲ್ಲೂಕಿನ ಸಂತಪುರದಲ್ಲಿಯೇ 110 ಕೆ.ವಿ. ವಿದ್ಯುತ್ ಉಪಕೇಂದ್ರವು ಕಾರ್ಯ ನಿರ್ವಹಿಸುತ್ತಿರುವುದರಿಂದ, ಈ ವಿದ್ಯುತ್ ಉಪಕೇಂದ್ರದಿಂದಲೇ ಔರಾದ್ ತಾಲ್ಲೂಕಿಗೆ ವಿದ್ಯುತ್ ಸರಬರಾಜಾಗುತ್ತಿದೆ. ಆದುದರಿಂದ, ಔರಾದ್ ತಾಲ್ಲೂಕಿನಾದ್ಯಂತ ವಿದ್ಯುತ್ ಸರಬರಾಜಿನಲ್ಲಿ ಈಗ ಸುಧಾರಣೆ ಉಂಟಾಗಿರುತ್ತದೆ. ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಬೀದರ್ ಜಿಲ್ಲೆಯಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗನ್ನು ಜಾರಿಗೊಳಿಸಲಾಗಿದೆ.

ಬೀದರ್ ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸುಧಾರಿಸುವ ಸಲುವಾಗಿ ಒಟ್ಟು 13 ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜನ್ನು ಇನ್ನಷ್ಟು ಸುಧಾರಿಸಲು ಖೇರ್ಡಾ (ಬಿ) ಗ್ರಾಮದಲ್ಲಿ ಒಂದು 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 109 ಕ್ಕೆ ಅನುಬಂಧ – 1

ಬೀದರ್ ಜಿಲ್ಲೆಯಲ್ಲಿ ಹಾಲಿ ಇರುವ 220/110 ಕೆ.ವಿ., 110/11 ಕೆ.ವಿ. ಮತ್ತು 33/11 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸಂಖ್ಯೆಗಳ ವಿಧಾನ ಸಭಾ ಕ್ಷೇತ್ರವಾರು ವಿವರಗಳು

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ವಿದ್ಯುತ್ ಉಪಕೇಂದ್ರಗಳ ಸಂಖ್ಯೆ			
		220/110ಕೆ.ವಿ.	110/11ಕೆ.ವಿ.	33/11ಕೆ.ವಿ.	ಒಟ್ಟು
1	ಹುಮ್ನಾಬಾದ್	1	2	4	7
2	ಬಸವಕಲ್ಯಾಣ	–	1	5	6
3	ಬೀದರ್	–	3	3	6
4	ಭಾಲ್ಕಿ	–	1	3	4
5	ಔರಾದ್	–	1	2	3
6	ಹುಲಸೂರು	–	–	2	2
	ಒಟ್ಟು	1	8	19	28

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 109 ಕ್ಕೆ ಅನುಬಂಧ – 2

ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ಉಪಕೇಂದ್ರಗಳ ವಿವರಗಳು.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಉದ್ದೇಶಿತ ವಿದ್ಯುತ್ ಉಪಕೇಂದ್ರಗಳ ವಿವರಗಳು	
		ಸ್ಥಳ	ವೋಲ್ಟೇಜ್
1	ಹುಮ್ನಾಬಾದ್	i) ಚಿಟಗುಪ್ಪ	110/11 ಕೆ.ವಿ.
		ii) ಹುಡಗಿ	33/11/ ಕೆ.ವಿ.
2	ಬಸವಕಲ್ಯಾಣ	i) ಮಂಠಾಳ	110/11 ಕೆ.ವಿ.
		ii) ಮೊರಖಂಡಿ	33/11 ಕೆ.ವಿ.
3	ಬೀದರ್	i) ಕಮಠಾಣ	110/11 ಕೆ.ವಿ.
4	ಭಾಲ್ಕಿ	i) ಹಲಬುರ್ಗಾ	220/11 ಕೆ.ವಿ.
		ii) ಲಾಡ	110/11 ಕೆ.ವಿ.
		iii) ಭೀಮಳಖೇಡಾ	33/11 ಕೆ.ವಿ.
		iv) ಭಾತಂಬ್ರಾ	33/11 ಕೆ.ವಿ.
		v) ಕಟಕ್ ಚಿಂಚೋಳಿ	33/11 ಕೆ.ವಿ.
5	ಔರಾದ್	i) ಖೇರ್ಡಾ (ಬಿ)	33/11 ಕೆ.ವಿ.
6	ಹುಲಸೂರು	i) ಮೆಹಕರ್	33/11 ಕೆ.ವಿ.
		ii) ಮುಚಳಂಬ	33/11 ಕೆ.ವಿ.